**ದಿನಾಂಕಃ 27.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಎದುರುದಾರರ ಪರ ಶ್ರೀ. ಡಿ.ಹೆಚ್. ವಕೀಲರಿಂದಃ**

ನಾನು ಶಿವಮೊಗ್ಗದಲ್ಲಿ ಎದುರುದಾರನ ಮನೆಯಲ್ಲಿರುವಾಗ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿದ ಬಗ್ಗೆ ಯಾವುದೇ ದೂರು ನೀಡಿಲ್ಲ ಅಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಆ ಸಂದರ್ಭದಲ್ಲಿ ನಾನು 2 ನೇ ಮಗುವಿಗೆ ಗರ್ಭಿಣಿಯಾಗಿದ್ದು, ಎದುರುದಾರನು ನನಗೆ ಕಾಲಿನಿಂದ ಒದ್ದಿರುವುದರಿಂದ ಶಿವಮೊಗ್ಗದ ಮೆಗ್ಗಾನ್

ಆಸ್ಪತ್ರೆಯಲ್ಲಿ ದಾಖಲಾಗಿ ಎಂ.ಎಲ್.ಸಿ ಮಾಡಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು 2019 ರಲ್ಲಿ ಆನವಟ್ಟಿ ಪೊಲೀಸ್ ಠಾಣೆಯಲ್ಲಿ ಎದುರುದಾರನ ವಿರುದ್ಧ ಒಂದು ದೂರುನ್ನು ಸಲ್ಲಿಸಿರುತ್ತೇನೆ. ಆ ಸಂದರ್ಭದಲ್ಲಿ ನಾನು ಕೆಲಸ ಮಾಡುತ್ತಿದ್ದೆ ಅಂದರೆ ಸರಿಯಲ್ಲ. ನಾನು ಎರಡನೇ ಮಗುವಿಗೆ ಗರ್ಭಿಣಿಯಾಗಿದ್ದಾಗ ಎದುರುದಾರನು ನನಗೆ ಸರಿಯಾಗಿ ಚಿಕಿತ್ಸೆ ಕೊಡಿಸಿರುವುದಿಲ್ಲ. ನಾನು ಆ ಸಂದರ್ಭದಲ್ಲಿ ಔಷಧಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ನಾನೇ ಔಷಧಿ ತೆಗೆದುಕೊಳ್ಳುತ್ತಿದ್ದೆ ಅಂದರೆ ಸರಿಯಲ್ಲ. ಮಗುವಿನ ಬೆಳವಣಿಗೆ ಚೆನ್ನಾಗಿ ಆಗಲಿ ಎಂದು ನಾನೇ ಸ್ವತಃ ಔಷಧಿಗಳನ್ನು ತೆಗೆದುಕೊಳ್ಳುತ್ತಿದ್ದೆ ಅಂದರೆ ಸರಿಯಲ್ಲ. ಆ ಕಾರಣ ನನ್ನ ಎರಡನೇ ಮಗು ಅಂಗವಿಕಲನಾಗಿ ಜನಿಸಿರುತ್ತದೆ ಅಂದರೆ ಸರಿಯಲ್ಲ. ನಾನು ಮತ್ತು ಎದುರುದಾರನು ಪರಸ್ಪರ ಪ್ರೀತಿಸಿ ಮದುವೆ ಆಗಿರುತ್ತೇವೆ ಅಂದರೆ ಸರಿಯಲ್ಲ. ಆ ಕಾರಣ ನಮ್ಮಿಬ್ಬರ ಕುಟುಂಬದ ನಡುವೆ ದ್ವೇಷ ಇತ್ತು ಅಂದರೆ ಸರಿಯಲ್ಲ. ನನ್ನ ತಂದೆಯವರು ಎದುರುದಾರನ ಕುಟುಂಬವನ್ನು ಬಿಟ್ಟು ಮನಗೆ ಬಾ ಎಂದು ಹೇಳುತ್ತಿದ್ದರು ಅಂದರೆ ಸರಿಯಲ್ಲ. ಆ ಕಾರಣ ಎದುರುದಾರನು ನನ್ನ ತಂದೆಯ ವಿರುದ್ಧ ಶಿವಮೊಗ್ಗದ ಪೋಲಿಸ್ ಠಾಣೆಯಲ್ಲಿ ದೂರು ಸಲ್ಲಿಸಿರುತ್ತಾರೆ ಅಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನನ್ನ ತಂದೆ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ನಾನು ದಾಖಲಿಸಿರುವ ವಿಚ್ಛೇದನ ಅರ್ಜಿಯು ಇನ್ನು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ ಅಂದರೆ ಸರಿ. ಸದರಿ

ಅ.ದಾ.ನಂ.10/2023 ರಲ್ಲಿ ನಾನು ನನ್ನ ಮದುವೆ ಕಾಲಕ್ಕೆ ನೀಡಿದ ಬಾಳು ಬಳುವಳಿ ಸಾಮಾನುಗಳನ್ನು ನೀಡಿದರೆ ವಿಚ್ಛೇದನೆ ನೀಡುತ್ತೇನೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ತಿದ್ದುಪಡಿ ಮಾಡಲು ನಾನು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ಸದರಿ ದಾವೆಯಲ್ಲಿ ಎದುರುದಾರನು ಹಾಜರಾಗಿ ತಕರಾರನ್ನು ಸಲ್ಲಿಸಿರುತ್ತಾನೆ ಅಂದರೆ ಸರಿ. ಸದರಿ ತಕರಾರಿನಲ್ಲಿ ತನಗೆ ಹೆಂಡತಿ ಬೇಕು ಎಂದು ನಮೂದಿಸಿರುತ್ತಾನೆ ಅಂದರೆ ಸರಿಯಲ್ಲ. ನಾನು ಎದುರುದಾರನೊಂದಿಗೆ ಮದುವೆ ಪೂರ್ವದಲ್ಲಿ ಔಷಧಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ತರಬೇತಿ ಪಡೆಯುತ್ತಿದ್ದೆ ಎಂದು ಉತ್ತರಿಸುತ್ತಾರೆ. 2019 ರಲ್ಲಿ ನಾನು ಶಿವಮೊಗ್ಗದ ಸವಳಂಗದ ಔಷಧ ಅಂಗಡಿಯಲ್ಲಿ ಕೆಲಸ ಮಾಡಿರುತ್ತೇನೆ ಅಂದರೆ ಸರಿ. ಅಲ್ಲಿ ನನಗೆ ಸಾಕಷ್ಟು ಸಂಬಳ ಇತ್ತು ಅಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನನಗೆ ಅನುಭವದ ಮೇರೆಗೆ ಔಷಧ ಅಂಗಡಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೆ ಅಂದರೆ ಸರಿಯಲ್ಲ. ಆ ಕಾರಣ ಹೆಚ್ಚುವರಿ ಸಂಬಳ ಇತ್ತು ಅಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನನಗೆ ಸುಮಾರು ರೂ.50,000/– ಕ್ಕಿಂತ ಹೆಚ್ಚಿನ ಸಂಬಳ ಇತ್ತು ಅಂದರೆ ಸರಿಯಲ್ಲ. ನಾನು ಈಗ ಪ್ರತ್ಯೇಕವಾಗಿ ಮನೆ ಮಾಡಿಕೊಂಡು ಮಕ್ಕಳೊಂದಿಗೆ ವಾಸವಾಗಿರುತ್ತೇನೆ. ಎದುರುದಾರನಿಗೆ ನಿಖರವಾಗಿ ಒಂದು ಆದಾಯ ಇಲ್ಲ ಅಂದರೆ ಸುಳ್ಳು. ಎದುರುದಾರನು ಶಿವಮೊಗ್ಗದಲ್ಲಿ ಟಿ.ಎಸ್. ಹೋಲ್ ಸೇಲ್ ಸರ್ಜಿಕಲ್ ಫಾರ್ಮಾ

ಎಂದು ಅವರದೆ ಸ್ವಂತ ವ್ಯವಹಾರ ಇದೆ. ಅದರೊಂದಿಗೆ ಅವರು ತೀರ್ಥಹಳ್ಳಿಯಲ್ಲಿ ಹೈಕೋಪಟ್ ಶಾಪ್ ಅಂಗಡಿಯಲ್ಲಿ ಕೆಲಸ ನಿರ್ವಹಿಸುತ್ತಾರೆ. ಅದರೊಂದಿಗೆ ಟಿ.ಐ. ನಲ್ಲಿ ಪಿ.ಎಸ್.ಓ ಆಗಿ ಕೆಲಸ ನಿರ್ವಹಿಸುತ್ತಾರೆ. ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಎದುರುದಾರನು ಸಂಚಾರ ಮಾಡಿಕೊಂಡು ಕೂಲಿ ಕೆಲಸ ಮಾಡುತ್ತಾ ಬಂದಿರುತ್ತಾರೆ ಅಂದರೆ ಸರಿಯಲ್ಲ. ಈಗಲೂ ಸಹ ಎದುರುದಾರನು ನನ್ನನ್ನು ಮತ್ತು ನನ್ನ ಮಕ್ಕಳನ್ನು ನೋಡಿಕೊಳ್ಳಲು ತಯಾರಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ಎರಡನೇ ಮದುವೆ ಆಗಿ ಎರಡು ಮಕ್ಕಳು ಇರುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ಕಿರುಕುಳದಿಂದ ಎದುರುದಾರನ ತಂದೆ ಹೃದಯಾಘಾತದಿಂದ ಮರಣ ಹೊಂದಿರುತ್ತಾರೆ ಅಂದರೆ ಸಾಕ್ಷಿಯು ಅವರಿಗೆ ಕಿಡ್ನಿ ಸಮಸ್ಯೆ ಮೊದಲಿನಿಂದಲೂ ಇತ್ತು ಎಂದು ಉತ್ತರಿಸುತ್ತಾರೆ. ನನ್ನ ಕಿರುಕುಳದಿಂದಲೇ ಮಾನಸಿಕವಾಗಿ ಹಿಂಸೆ ಅನುಭವಿಸಿ ಎದುರುದಾರನ ತಂದೆ ಮರಣ ಹೊಂದಿರುತ್ತಾರೆ ಅಂದರೆ ಸುಳ್ಳು. ಎದುರುದಾರನು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದು, ಅವರನ್ನು ನೋಡಿಕೊಳ್ಳುವ ಜವಾಬ್ದಾರಿ ಎದುರುದಾರನ ಮೇಲೆ ಇರುತ್ತದೆ ಅಂದರೆ ಸುಳ್ಳು. ಎದುರುದಾರನು ಈಗಲೂ ಸಹ ನನ್ನ ಮೇಲೆ ಪ್ರೀತಿ ಇದ್ದು, ನೋಡಿಕೊಳ್ಳಲು ತಯಾರಿರುತ್ತಾರೆ ಅಂದರೆ ಸರಿಯಲ್ಲ. ನನಗೆ ಸಾಕಷ್ಟು ಆದಾಯ ಇರುವುದರಿಂದ ಎದುರುದಾರನು ಜೀವನಾಂಶ ನೀಡಲು ಅರ್ಹನಾಗಿರುವುದಿಲ್ಲ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಸಿ/ಸಿ 1 ನೇ ಹೆಚ್ಚುವರಿ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**